ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ನಮ್ಮ ಸಾರಿಗೆ ಸಚಿವರು ಸಹ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ತೆಗೆದು ಕೊಂಡರೆ ನಮ್ಮ ಬೆಂಗಳೂರಿಗೆ ಎಷ್ಟು ಡಿಪೋಗಳು ಬೇಕೋ ಅಷ್ಟು ಕಟ್ಟುವುದಕ್ಕೆ ಬಹಳಷ್ಟು ಸುಲಭ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

SRI AZEEZ SAIT : All that my friend has suggested, we have done it. We have taken up this matter personally with BDA. Our officers are in touch with those officials and there is no question of difficulty in acquiring the lands for this purpose. As regards World Bank loan we are also at it and at the same time I would like to announce that we are seriously thinking of introducing battery-powered buses in the city and other cities of the State. Already we are in touch with BHEL. Recently, they have brought out 40 seater buses. That will help us in economy of fuel and it will also be anti - pollution. But that will take some time. I assure you that the services of the BTS will be improved day by day.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಮುಂಚೆ ನನ್ನ ಪ್ರಶ್ನೆ ಇತ್ತು ತಾವು ಕರೆಯಲಿಲ್ಲ.

ಅಧ್ಯಕ್ಷರು : ನಾನು ಕರೆದೆ, ನೀವು ಎಲ್ಲಿ ಹೋಗಿದ್ದೀರಿ.

ಶ್ರೀ ಜಿ.ಎಸ್. ಆಚಾರ್ : ನಾನು ಇಲ್ಲಿಯೇ ಇದ್ದೆ. ತಾವು ಕರೆದದ್ದು ನನಗೂ ಗೊತ್ತಾಗಲಿಲ್ಲ.

ಶ್ರೀ ಹೆಚ್. ವಿಕಾಂತಯ್ಯ : ಅವರು ಮಾತುಕತೆಯಲ್ಲಿ ತೊಡಗಿದ್ದರು.

ಅಧ್ಯಕ್ಷರು : ನೀವೆಲ್ಲಾ ಸಾಕ್ಷಿ ಇದ್ದೀರಿ.

ಶ್ರೀ ಜಿ.ಎಸ್. ಆಚಾರ್ : ಈಗಾಲಾದರಾ ತಾವು ಆಲೋ ಮಾಡಬೇಕೆಂದು ನನ್ನ ಪ್ರಾರ್ಥನೆ.

MR. SPEAKER : Sorry, I have passed over to the next question. When the members are not attentive this is the price they have to pay.

ಚಿಕ್ಕನಾಯಕನಹಳ್ಳಿಗೆ ಆಸ್ಪತ್ರೆಯ ಸೌಲಭ್ಯಗಳು

492 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ಸಾರ್ವಜನಿಕ ಆಸ್ಪತ್ರೆಯಾಗಲೀ, ಸಮುದಾಯ ಆರೋಗ್ಯ ಕೇಂದ್ರವಾಗಲಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚಿಕ್ಕನಾಯಕನಹಳ್ಳಿ ಸಾರ್ವಜನಿಕ ಆಸ್ಪತ್ರೆ, ಕಾಮನ್ ಹೆಲ್ತ್ ಸೆಂಟರ್ ಅನ್ನು ಮಂಜೂರು ಮಾಡಲು ಸರ್ಕಾರದವರಿಗೆ ಇರುವ ತೊಂದರೆ ಏನು?

ಇ) ತಾಂತ್ರಿಕ ತೊಂದರೆಗಳು ಇಲ್ಲದೆ ಹೋದಲ್ಲಿ ಸರ್ಕಾರದವರು ಈ ಮಂಜೂರಾತಿಯನ್ನು ಯಾವಾಗ ನೀಡಲಿದ್ದಾರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು)

ಅ) ಬಂದಿದೆ.

ಆ) ತುಮಕೂರು ಜಿಲ್ಲಾ ಪರಿಷತ್‌ನಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಅವಶ್ಯಕವಾದ ನಿವೇಶನ ಮತ್ತು ಸೂಕ್ತವಾದ ಹಣ ಒದಗಿಸಿ, ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸರ್ಕಾರದವರು ಚಿಕ್ಕನಾಯಕನಹಳ್ಳಿಯಲ್ಲಿ ಸಾರ್ವಜನಿಕ ಆಸ್ಪತ್ರೆ ಇಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ಒಂದೇ ಒಂದು ತೊಡಕು ಆಗಿದೆ. ಜಿಲ್ಲಾ ಪರಿಷತ್‌ನವರು ಹಣ ಒದಗಿಸಿದರೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ನನಗೆ ಅರ್ಥ ಆಗಿಲ್ಲ. ಜಿಲ್ಲಾ ಪರಿಷತ್‌ನವರು ಅಲ್ಲಿ ಒಂದು ಜನರಲ್ ಹಾಸ್ಪಿಟಲ್ ಅಥವಾ ಕಮುನಿಟಿ ಹೆಲ್ತ್ ಸೆಂಟರ್ ಮಾಡುವುದಕ್ಕೆ ಏಕೆ ಹಣ ಒದಗಿಸಬೇಕು? ನಿವೇಶನ ಒದಗಿಸಿ ಎಂದು ಕೇಳಿರುವುದು ವಾಸ್ತವ, ಅದನ್ನು ಒದಗಿಸಲಿಕ್ಕೆ ನಾವು ಅಲ್ಲಿ ಪ್ರಸ್ತಾಪ ಮಾಡುತ್ತೇವೆ. ಹಣವನ್ನು ತಾವೇ ಒದಗಿಸಿಕೊಡಬೇಕಾಗುತ್ತದೆ. ಆದ್ದರಿಂದ ಯಾವಾಗ ಹಣವನ್ನು ಒದಗಿಸಿ ಅಲ್ಲಿ ಆಸ್ಪತ್ರೆ ಮಾಡಿಕೊಂಡುತ್ತೀರಿ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೆ,ಅಲ್ಲಿ ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯನಿರ್ವಹಣೆ ಮಾಡುತ್ತಿದೆ. ಇದನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಆಸೆ ನಮಗೂ ಇದೆ. ಅದರ ಜಿಲ್ಲಾಪರಿಷತ್‌ನವರು ಅದಕ್ಕೆ ಸ್ಥಳ ಮತ್ತು ಹಣವನ್ನು ಒದಗಿಸಿಕೊಡಬೇಕಾದುದು ನಿಯಮ ಆ ನಿಯಮದ ಪ್ರಕಾರ ಅವರು ಒದಗಿಸಿಕೊಟ್ಟರೆ ನಾವು ಅದನ್ನು ಮೇಲ್ದರ್ಜೆಗೆ ಏರಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ಇದನ್ನು ಸರಕಾರದವರೇ ಮಾಡಬೇಕಾಗುತ್ತದೆ. ಪ್ಲಾನ್‌ನಲ್ಲಿ ಇದನ್ನು ಸರಕಾರದವರು ಒದಗಿಸಿಕೊಡಬೇಕಾದಂಥಾದ್ದು. ಸರಕಾರದವರು ಹಣವನ್ನು ಒದಗಿಸಿದ ಮೇಲೆ ಜಿಲ್ಲಾಪರಿಷತ್ತ್‌ನವರು ಪೇಮೆಂಟ್ ಮಾಡಿಕೊಂಡು ಬರುತ್ತಾರೆ. ಹೀಗೆ ತಮಗೆ ಇರುವ ಅಧಿಕಾರವನ್ನು ಹೇಳುವುದನ್ನು ಬಿಟ್ಟು ಜಿಲ್ಲಾಪರಿಷತ್ತ್‌ನವರು ಮಾಡಬೇಕಾಗಿದೆ ಎಂದು ಏತಕ್ಕೆ ಹೇಳುತ್ತಿರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.ಈ ಒಂದು ಕಾರ್ಯಕ್ರಮವನ್ನು ತಕ್ಷಣ ಮಾಡದೇ ಹೋದರೆ ಬೇಸಿಕ್ ರಿಕ್ವಾಯರ್‌ಮೆಂಟ್ಸ್ ಏನಿದೆ ಅಂದರೆ ವಿಕ್ಸ್‌ರೇ ತೆಗೆಯುವುದಕ್ಕೆ ಬ್ಲಡ್ ಕೊಡಲಿಕ್ಕೆ ಯಾವ ವ್ಯವಸ್ಥೆಯೂ ತಾಲ್ಲೂಕು ಕೇಂದ್ರಗಳಲ್ಲಿ ಇಲ್ಲ. ಅದಕ್ಕಾಗಿ ನಾವು ತುಮಕೂರಿಗೆ ಬರಬೇಕಾಗುತ್ತದೆ.ಅಲ್ಲಿಗೆ ಬರುವವರೆಗೆ ರೋಗಿಗಳು ಉಳಿಯುವ ಸ್ಥಿತಿ ಇಲ್ಲ. ಆದುದರಿಂದ ಇದನ್ನು ಆದ್ಯತೆಯ ಮೇಲೆ ತೆಗೆದುಕೊಂಡರೆ, ಸೈಟ್‌ನ್ನು ಕೊಡುವ ಕೆಲಸವನ್ನು ನಾವು ಸ್ಥಳೀಯವಾಗಿ ಕುಳಿತು ಮಾಡುತ್ತೇವೆ. ಆದ್ದರಿಂದ ದಯವಿಟ್ಟು ಈ ಒಂದು ಕೆಲಸವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಸದಸ್ಯರ ಕೋರಿಕೆಯನ್ನು ನಾನು ಪರಿಶೀಲಿಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಎಂ. ರಾಮಪ್ಪನವರು ಗೈರು ಹಾಜರಾಗಿದ್ದರು)

ಬಳ್ಳಾರಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು

41 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?